ಮಲಯಾಳ ಭಾಷೆಯ ಮೇಲೆ ಅಪಾರ ಹಿಡಿತವಿರುವ ಮೋಹನ ಕುಂಟಾರ್ ಅವರು ಕನ್ನಡ ಮತ್ತು ಮಲಯಾಳ ಭಾಷೆಯ ನಡುವಿನ ಸೇತುವೆಯಂತೆ ನಿರಂತರ ಕೆಲಸ ಮಾಡುತ್ತಿರುವವರು. ಮಲಯಾಳದಿಂದ ವೈಕಂ ಮುಹಮ್ಮದರ 'ಬಶೀರ್ ಕಥೆಗಳು', 'ವಾಸುದೇವನ್ ನಾಯರ್ ಕತೆಗಳು', ತಗಳಿ ಶಿವಶಂಕರ ಪಿಳ್ಳೆಯವರ 'ತೋಟಿಯ ಮಗ', ಉರುಬ್ ಅವರ 'ಸುಂದರಿಯರು ಸುಂದರರು', ಪಿ. ವತ್ಸಲಾ ಅವರ 'ಆಗ್ನೇಯ', ಒ. ಚಂದು ಮೆನೋನ್ ಅವರ 'ಶಾರದ' ಕಾದಂಬರಿಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಮೂಲತಃ ಕೇರಳದ ಕಾಸರಗೋಡಿನ ಕುಂಟಾರಿನವರು. ಪ್ರಸ್ತುತ ಹಂಪಿಯ ಕನ್ನಡ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದಾರೆ. ಸಂಶೋಧನೆ, ಅನುವಾದ ಕ್ಷೇತ್ರಗಳಲ್ಲಿ ಕೆಲಸ ಮಾಡಿರುವ ಅವರ 40ಕ್ಕೂ ಹೆಚ್ಚು ಕೃತಿಗಳು ಪ್ರಕಟವಾಗಿವೆ.

ಸ್ವಲ್ಪ ಕಷ್ಟವಾಗುತ್ತಿತ್ತು. ಕಾರಣವೇನೂ ಇಲ್ಲ. ಅವಳ ಹಾಗೆ 'ಡ್ಯಾಡಿ' ಎಂದು ಕರೆದು ಓಡಿಹೋಗಿ ಅವರ ಮಡಿಲಲ್ಲಿ ಕುಳಿತುಕೊಳ್ಳುವಷ್ಟು ಹೃದಯ ಗಟ್ಟಿಯಿಲ್ಲ. ದೂರದಿಂದ ಅಪ್ಪ ಆರಾಮ ಕುರ್ಚಿಯಲ್ಲಿ ನಿದ್ರಿಸುವಾಗ ನಾನು ನೋಡುವುದಿದೆ. ದಪ್ಪನೆಯ ಫ್ರೇಮಿರುವ ಆ ಕನ್ನಡಕ ಮುಖ ತಿರುಗಿಸುವಾಗ ಹೊಳೆಯುವುದನ್ನು ನೋಡಲು ಸ್ವಾರಸ್ಯವಿರುತ್ತದೆ. ಒಮ್ಮೆ ಧೈರ್ಯ ಮಾಡಿ ಕೇಳುವುದೆಂದೇ ತೀರ್ಮಾನಿಸಿದೆ. ಲೀಲಾಳ ಮುಂದೆ ತೀರಾ ಕಳಪೆಯಾಗಬಾರದಲ್ಲ. ಹತ್ತಿರ ಹೋಗಿ ನಿಂತಾಗ ಅಪ್ಪ ಕೇಳಿದರು, 'ಊಂ?' ಮುಖವೆತ್ತಿದಾಗ ಆ ಕನ್ನಡಕ ಹೊಳೆಯಿತು.ನನಗೆ ಏನೂ ಹೇಳುವುದು ಸಾಧ್ಯವಾಗಲಿಲ್ಲ. ನನ್ನ ಸಣ್ಣತಲೆ ಸವರುತ್ತಾ ಅಪ್ಪ ಕೇಳಿದರು, 'ಶಾಲೆಗೆ ಹೋಗುವುದಿಲ್ಲವೇ?' 'ಹೂಂ...' ಮತ್ತೇನನ್ನೂ ಕೇಳಲಿಲ್ಲ, ಒಮ್ಮೆ ಹೇಳುವುದೂ ಸಾಧ್ಯವಾಗಲಿಲ್ಲ. ರಬ್ಬರ್ ಗೂಬೆ ಇಲ್ಲವಾದರೂ ಹೋಗಲಿ, ಕ್ಲಾಸಿನಲ್ಲಿ ಮಕ್ಕಳು ನನಗೆ ತೊಂದರೆ ಕೊಡುವುದ್ಯಾಕೆ? ಅಪ್ಪ ಬಂದುದು, ಜೊತೆಗೆ ಹುಡುಗಿಯೊಬ್ಬಳನ್ನು ಕರೆತಂದುದು, ಊರವರಿಗೆ ಎಷ್ಟು ಬೇಗ ಗೊತ್ತಾಯಿತು. ನನ್ನ ಮನೆಗೆ ಒಬ್ಬಳು ಹುಡುಗಿ ಬಂದುದರಿಂದ ಚಡಪಡಿಕೆಯಾದುದು ನನ್ನ ಕ್ಲಾಸಿನ ಜಾನುವಿಗೆ.ನನಗೆ ಕೇಳಿಸುವಂತೆ ಅವಳು ಹೇಳುತ್ತಾಳೆ, 'ಈ ಹುಡುಗನ ಅಪ್ಪ ಬರುವಾಗ ಒಬ್ಬಳು ಹುಡುಗಿಯನ್ನು ಕರೆದುಕೊಂಡು ಬಂದಿದ್ದಾರೆ.'

'ಎಲ್ಲಿಂದ?' ಜೊತೆಗಿರುವ ಅಗಸರ ನಾಣಿ ಕೇಳಿದಳು.

'ಕೊಲೊಂಬೊದಿಂದ. ಮತ್ತೆ ಅಮ್ಮ ಹೇಳುವುದು ಈ ಹುಡುಗನ ಅಪ್ಪನಿಗೆ ಅಲ್ಲಿಯೂ ಹೆಂಡತಿ ಮಕ್ಕಳಿದ್ದಾರಂತೆ...'

'ಥೂ' ಎಂದು ಮುಖಕ್ಕುಗುಳಿ ಆ ಹುಡುಗಿಯ ಕೆನ್ನೆಗೊಂದು ಬಾರಿಸಬೇಕೆಂದು ಅನ್ನಿಸಿತು. ಆದರೆ, ಮಾಡಲಿಲ್ಲ. ಅವಳು ನನಗೆ ಗೋಡಂಬಿ ಕೊಟ್ಟಿದ್ದಾಳೆ. ಆದರೂ ಅವಳು ಹೇಳಿದ್ದು ಸರಿಯಲ್ಲ. ನನ್ನ ಅಪ್ಪನ ಕುರಿತು... ಅಪ್ಪನಿಗೆ ಕೊಳಂಬೋದಲ್ಲಿ... ಛೇ... ಅದು ಸುಳ್ಳು. ಅವಳ ಅಮ್ಮನೇ ಸುಳ್ಳುಗಾರ್ತಿ! ಅವಳ ಅಮ್ಮ ಅಜ್ಜಿ ಎಲ್ಲರೂ ಅಪ್ಪಟ ಸುಳ್ಳುಗಾರರು... ಅದು ನನ್ನನ್ನು ದುಃಖಕ್ಕೀಡು ಮಾಡಿತು. ಸಂಶಯ ಪರಿಹರಿಸಲು ಸಂಜೆ ಕೆರೆಯಿಂದ ಮರಳುವಾಗ ನಾನು ಅಮ್ಮನಲ್ಲಿ ಕೇಳಿದೆ, 'ಅಮ್ಮ, ನಮ್ಮ ಕ್ಲಾಸಿನ ಜಾನು ಹೇಳುತ್ತಾಳೆ...' 'ಊಂ?' 'ಅಪ್ಪನನ್ನು.... ಅಪ್ಪನಿಗೆ... ಕೊಳಂಬೋದಲ್ಲಿ ಹೆಂಡತಿ ಮಕ್ಕಳಿದ್ದಾರಂತೆ...' ಜಾನುವಿಗೆ ಕೊಡಬೇಕೆಂದು ನಾನು ಭಾವಿಸಿದ್ದ ಪೆಟ್ಟು ಸಿಕ್ಕಿದ್ದು ನನಗೆ. 'ನಿನ್ನ ಅಪ್ಪನಲ್ಲಿಯೇ ಕೇಳು' ಈ ಬಗೆಯ ವಿಷಯವನ್ನು ಯಾರು ಹೇಳಿದರೂ ಗಮನಿಸುವುದಿಲ್ಲವೆಂದು ನಿಶ್ಚಯಿಸಿದೆ. ಯಾರಲ್ಲಿ ಏನನ್ನು ಕೇಳಲೂ ಇಲ್ಲ. ಅಪ್ಪ ಬಂದ ಆರನೆಯ ದಿನ ರಾತ್ರಿಯಲ್ಲಿ ಅದು ಘಟಿಸಿತು. ಅಪ್ಪ ಮಲಗುವ ಕೋಣೆಯ ಸಮೀಪದ ಕೋಣೆಯಲ್ಲಿ ನಾನು ಮಲಗುವುದು. ಊಟ ಮಾಡಿ ಮಲಗಲು ಹೋದಾಗ ಅಪ್ಪನ ದೇಹಕ್ಕೆ ಅಂಟಿಕೊಂಡು ಲೀಲಾ ಮಾತನಾಡುತ್ತಿದ್ದಾಳೆ. ಕೋಣೆಯೊಳಗಿನಿಂದ ಚುಟ್ಟಾದ ತೀವ್ರ ಘಾಟು ವಾಸನೆ ಹೊರ ಹೊಮ್ಮುತ್ತಿದೆ. ನಾನು ಅದನ್ನು ನೋಡಲಿಲ್ಲ ಎಂಬಂತೆ ನಟಿಸಿದೆ. ಅಪ್ಪನ ಹತ್ತಿರನಿಂತು ನಾನೊಮ್ಮೆಯೂ ಹಾಗೆ ಮಾತನಾಡಿದ್ದಿಲ್ಲ ನನಗೆ ಅಸೂಯೆಯಾಯಿತು. ನಾನೊಬ್ಬ ಯಾಕೂ